# ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

(ಕರ್ನಾಟಕ ಸರ್ಕಾರದ ಅಧೀನದ ಸ್ವಾಯತ್ತ ಸಂಸ್ಥೆ)
ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೋಟೆ, ಬೆಂಗಳೂರು –560 002.
gdcribangalore@gmail.com


ಸಂಖ್ಯೆ:ಸದಂಕಾಸಂಸಂ/ಲೆಕ್ಕಪತ್ರ/5/2016–17

ನಿರ್ದೇಶಕರು ಮತ್ತು ಡೀನ್ ರವರ ಕಾರ್ಯಾಲಯ,
ದಿನಾಂಕ:23.11.2016

## ಸೇರ್ಪಡೆ ಅಧಿಸೂಚನೆ

ವಿಷಯ:– ಸೇವಾ ತೆರಿಗೆ ಮತ್ತು ಆದಾಯ ತೆರಿಗೆ ಸಂಬಂಧ ಬೇಬಾಕಿ ಪ್ರಮಾಣ ಪತ್ರ ಸಲ್ಲಿಸುವ ಬಗ್ಗೆ

---**---

ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಈ ಸಂಸ್ಥೆಯ ವತಿಯಿಂದ ಸಂಸ್ಥೆಯ 2016–17ನೇ ಸಾಲಿನ ಅವಧಿಗೆ ಸ್ವಚ್ಛತಾ ಮತ್ತು ಭದ್ರತಾ ಕಾರ್ಯವನ್ನು ಖಾಸಗಿ ಸಂಸ್ಥೆಯವರಿಗೆ ವಹಿಸುವ ಸಂಬಂಧ ದಿನಾಂಕ:25.10.2016ರಂದು ಹೊರಡಿಸಿರುವ ಟೆಂಡರ್ ಪ್ರಕಟಣೆ ಸಂಖ್ಯೆ:ಸದಂಕಾಸಂಸಂ/ಲೆಕ್ಕಪತ್ರ/5/2016–17ರ ಟೆಂಡರ್ ದಾಖಲಾತಿ ಪುಟ ಸಂಖ್ಯೆ 4ರ ನಿಬಂಧನೆ 6ರಲ್ಲಿ 2015–16ರ ಆರ್ಥಿಕ ವರ್ಷದ ಆದಾಯ ತೆರಿಗೆ ಬೇಬಾಕಿ ಪ್ರಮಾಣ ಪತ್ರ ಹಾಗೂ ನಿಬಂಧನೆ ಸಂಖ್ಯೆ 13ರಲ್ಲಿ 2015–16ನೇ ಸಾಲಿನ ಆರ್ಥಿಕ ವರ್ಷದ ಸೇವಾ ತೆರಿಗೆ ಬೇಬಾಕಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದು ಸಲ್ಲಿಸುವುದೆಂದು ಸೇರ್ಪಡೆ ಮಾಡಲಾಗಿದೆ. ಟೆಂಡರ್ ದಾಖಲಾತಿಯಲ್ಲಿ ನಮೂದಿಸಿರುವ ಅವಧಿಗಿಂತ ಹೆಚ್ಚಿನ ಅವಧಿಯ (ಗರಿಷ್ಠ 03 ವರ್ಷ) ಸೇವಾ ತೆರಿಗೆ, ಇ.ಎಸ್.ಐ., ಪಿ.ಎಫ್, ಆದಾಯ ತೆರಿಗೆ ಮತ್ತು ಕರ್ನಾಟಕ ವೃತ್ತಿ ಕಸಬುಗಳ ಅಜೀವಿಕಗಳ ಹಾಗೂ ಉದ್ಯೋಗಗಳ ಮೇಲಣ ತೆರಿಗೆ ಸಂಬಂಧ ನಿಯಮಾನುಸಾರ ಪಾವತಿ ಮಾಡಿರುವ ಚಲನ್‌ಗಳ ಪ್ರತಿಗಳು ಟೆಂಡರ್ ಸಮಿತಿಗೆ ಅವಶ್ಯಕವೆಂದು ಕಂಡು ಬಂದರೆ ಈ ಸಂಸ್ಥೆಗೆ ಹಾಜರುಪಡಿಸಲು ಸೂಚಿಸಿದ್ದಲ್ಲಿ ಟೆಂಡರ್‌ದಾರರು ಸಲ್ಲಿಸತಕ್ಕದ್ದು ಎಂದು ಸೇರ್ಪಡೆ ಮಾಡಲಾಗಿದೆ. ಬಿಡ್‌ದಾರರು ಸೇರ್ಪಡೆ ಅಧಿಸೂಚನೆಯನ್ವಯ ಬಿಡ್ ಮಾಡುವುದು. ಈಗಾಗಲೇ ಬಿಡ್ ಮಾಡಿರುವ ಬಿಡ್‌ದಾರರು ಪರಿಷ್ಕೃತ ಟೆಂಡರ್ ಸಲ್ಲಿಸತಕ್ಕದ್ದು.

ಡೀನ್ ಮತ್ತು ನಿರ್ದೇಶಕರು,
ಸರ್ಕಾರಿ ದಂತ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ, ಬೆಂಗಳೂರು.